ಸರ್ಕಾರದ ಪರಿಶೀಲನೆಯಲ್ಲಿದೆ. ಇದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ.—ಅವರು ಗೃಹರಕ್ಷಕ ಸಿಬ್ಬಂದಿ ವರ್ಗವನ್ನು ನೀವು ಯಾವಾಗ ಫಿಲಪ್ ಮಾಡುತ್ತೀರಿ ? ಎಷ್ಟು ಸಬ್ ಇನ್‌ಪೆಕ್ಟರುಗಳು, ಎಷ್ಟು ಹೆಚ್.ಸಿ.ಗಳು ಎಷ್ಟು ಪಿ.ಸಿ.ಗಳು ಬೇಕೆಂದು ಪ್ರೊಪೋಸಲ್‌ನ್ನು ಕಳುಹಿಸಿದ್ದಾರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅಲ್ಲಿನ ಎಸ್.ಪಿ.ಯವರು ಅಡಿಷನಲ್ ಆಗಿ ಪೋಲಿಸ್ ಸಬ್ ಇನ್‌ಪೆಕ್ಟರ್‌ಗಳು–೨, ಎ. ಎಸ್. ಐ. ಗಳು–೪, ಹೆಡ್ ಕಾನ್‌ಸ್ಟೇಬಲ್‌ಗಳು–೧೪, ಪೋಲಿಸ್ ಕಾನ್‌ಸ್ಟೇಬಲ್‌ಗಳು–೩೪ ಬೇಕೆಂದು ಕೇಳಿದ್ದಾರೆ. ಮಂಗಳೂರಿನ ಪೂರ್ವ ಮತ್ತು ಪಶ್ಚಿಮ ಸಂಚಾರಿ ಪೋಲಿಸ್ ಸ್ಟೇಷನ್ ಎಂದು ೨ ಸ್ಟೇಷನ್‌ಗಳಿವೆ. ಪೂರ್ವ ಸಂಚಾರಿ ಪೋಲಿಸ್ ಸ್ಟೇಷನ್‌ಗೆ ೨ ಎಸ್. ಐ. ಗಳು, ೧೦ ಹೆಡ್ ಕಾನ್‌ಸ್ಟೇಬಲ್‌ಗಳು, ೨೭ ಪೋಲಿಸ್ ಕಾನ್‌ಸ್ಟೇಬಲ್‌ಗಳನ್ನು ಕೊಡುತ್ತಿದ್ದೇವೆ. ಇನ್ನು ಪಶ್ಚಿಮ ಸಂಚಾರಿ ಪೋಲಿಸ್ ಸ್ಟೇಷನ್‌ಗೆ ಏನು ಸಿಬ್ಬಂದಿಯನ್ನು ಕೊಡಬೇಕೋ ಅದನ್ನು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಪೂರೈಸುತ್ತೇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ.—ಮಾನ್ಯ ಅಧ್ಯಕ್ಷರೇ. ಹೋದ ಸಲ ಇದೇರೀತಿಯಾಗಿ ಪ್ರಶ್ನೆಯನ್ನು ಕೇಳಿದೆ. ಅದಕ್ಕೆ ರಿಪ್ಲೈ ಬಂದಿದ್ದು ಏನೆಂದರೆ, ಸಂಚಾರಿ ಪೋಲಿಸ್ ಸಿಬ್ಬಂದಿಯನ್ನು ಹೆಚ್ಚಿಸುವ ಸಲುವಾಗಿ ಕ್ರಮ ಕೈಗೊಳ್ಳುವುದಾಗಿ ಹೋದ ವರ್ಷವೇ ಪ್ರಪೋಸಲ್ ಬಂದಿದೆ ಎಂದು ಹೇಳಿದರು. ಅದಾಗಿ ವರ್ಷವಾಗುತ್ತಾ ಬಂದಿದೆ. ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ವಿಧಾನ ಸೌಧದ ಸುತ್ತಲೂ ಇರುವ ಹತ್ತನೇ ಒಂದು ಭಾಗದಷ್ಟು ಪೋಲಿಸ್ ಸಿಬ್ಬಂದಿಯನ್ನು ಮಂಗಳೂರಿಗೆ ಕಳುಹಿಸಿದರೆ ಸಾಕಾಗುತ್ತದೆ. ಮಂಗಳೂರಿನಲ್ಲಿ ಯಾವ ರೀತಿಯಾದ ಪೊಲೀಸ್ ಸಿಬ್ಬಂದಿಯೂ ಇಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಮುಂಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ, ಆದಷ್ಟು ಜಾಗ್ರತೆಯಾಗಿ ಪೋಲಿಸ್ ಸಿಬ್ಬಂದಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಎಂದು. ಏತಕ್ಕೆಂದರೆ ಅಲ್ಲಿ ಬಹಳ ವಾಗಿ ಆಕ್ಸಿಡೆಂಟ್‌ಗಳು ಆಗುತ್ತಿವೆ. ಬಹಳ ಡಿಫಿಕಲ್ಟಿಯಿದೆ. ಆದ್ದರಿಂದ ಪೋಲಿಸ್ ಸಿಬ್ಬಂದಿಯನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಮಂಗಳೂರಿನಲ್ಲಿ ಅಷ್ಟೇ ಅಲ್ಲ, ಬೆಂಗಳೂರಿನಲ್ಲಿಯೂ ಅದೇ ಪರಿಸ್ಥಿತಿ ಇದೆ. ವಿಧಾನಸೌಧ ಸುತ್ತಮುತ್ತಲೂ ಇರತಕ್ಕಂಥವರನ್ನು ಕಳುಹಿಸಲು ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ ಮಾನ್ಯ ಸದಸ್ಯರಿಗೆ ರಕ್ಷಣೆಗೆ ಇರಬೇಕು. ಅದಕ್ಕೋಸ್ಕರವೇ ವಿಧಾನ ಸೌಧ ಸುತ್ತಮುತ್ತಲೂ ಪೋಲಿಸ್ ಸಿಬ್ಬಂದಿಯನ್ನು ಇಟ್ಟಿದ್ದೇವೆ.

ಶ್ರೀ ಯು. ಭೂಪತಿ.—ನಮಗೆ ಯಾರಿಗೂ ರಕ್ಷಣೆ ಬೇಕಾಗಿಲ್ಲ.

ಭ್ರಷ್ಟ ಅಧಿಕಾರಿಗಳ ಮತ್ತು ನೌಕರರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ

೧೫೫೫. ಶ್ರೀ ಆರ್. ರೋಷನ್ ಬೇಗ್ (ಶಿವಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಧಿಕಾರಿಗಳು ಮತ್ತು ನೌಕರರ ಮನೆಗಳ ಮೇಲೆ ೧೯೮೫ ಮತ್ತು ನಂತರದಲ್ಲಿ ಲೋಕಾಯುಕ್ತರು ನಡೆಸಿದ ದಾಳಿಗಳ ಸಂಖ್ಯೆ ಮತ್ತು ಅಂತಹ ಅಧಿಕಾರಿಗಳ ನೌಕರರ ಆಸ್ತಿಯ ವಿವರಗಳು ?

ಆ) ಅಂತಹವರ ಆಸ್ತಿಗಳು ಅವರ ನಿಗದಿತ ಆದಾಯಕ್ಕೆ ಹೊಂದಾಣಿಕೆಯಾಗದಿರುವ ಪ್ರಕರಣಗಳ ಸಂಖ್ಯೆ ?

ಇ) ಅಂತಹ ಪ್ರಕರಣಗಳಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಜನವರಿ ೧೯೮೫ ರಿಂದ ಜುಲೈ ೧೯೮೭ರ ವರೆಗೆ ಲೋಕಾಯುಕ್ತವು ದಾಳಿ ಮಾಡಿದ ಪ್ರಕರಣಗಳ ಸಂಖ್ಯೆ ೩೮.

ಅಧಿಕಾರಿಗಳು	...	೨೪
ನೌಕರರು	...	೧೪

ಸಾರ್ವಜನಿಕ ಹಿತದೃಷ್ಟಿಯಿಂದ ಆಸ್ತಿಯ ವಿವರಗಳನ್ನು ಕೊಡಲು ಸಾಧ್ಯವಿಸುವುದಿಲ್ಲ.

ಆ) ಒಟ್ಟು ೩೮ ಪ್ರಕರಣಗಳ ಪೈಕಿ ೮ ಪ್ರಕರಣಗಳಲ್ಲಿ ತನಿಖೆ ಮುಗಿದಿದ್ದು ಅದರಲ್ಲಿ ೬ ಪ್ರಕರಣಗಳಲ್ಲಿ ನಿಗದಿತ ಆದಾಯಕ್ಕೆ ಹೊಂದಾಣಿಕೆಯಾಗದಿರುವ ಪ್ರಕರಣಗಳು ಬೆಳಕಿಗೆ ಬಂದಿರುತ್ತವೆ. ಉಳಿದ ಪ್ರಕರಣಗಳು ತನಿಖೆಯ ಹಂತದಲ್ಲಿರುತ್ತವೆ.

ಇ) ಈ ೬ ಪ್ರಕರಣಗಳಲ್ಲಿ ಸರ್ಕಾರವು ೩ ಪ್ರಕರಣಗಳಲ್ಲಿ ದಾವೆಯನ್ನು ಸಂಬಂಧಿಸಿದ ನ್ಯಾಯಾಲಯದಲ್ಲಿ ದಾಖಲು ಮಾಡಲು ಅನುಮತಿ ನೀಡಿದೆ. ೨ ಪ್ರಕರಣಗಳಲ್ಲಿ ಇಲಾಖಾ ವಿಚಾರಣೆ ನಡೆಸಲು ಆದೇಶ ನೀಡಿದೆ. ಇನ್ನೊಂದು ಪ್ರಕರಣಗಳಲ್ಲಿನ ಅಧಿಕಾರಿಯು ಹೊಂದಿರುವ ಆಸ್ತಿಯಲ್ಲಿ ತನ್ನ ಆದಾಯಕ್ಕಿಂತ ಹೆಚ್ಚಿನ ಆಸ್ತಿಯು, ಅತ್ಯಲ್ಪವಾದ್ದರಿಂದ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ.

ಶ್ರೀ ಆರ್. ರೋಷನ್ ಬೇಗ್,—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. Details of particulars cannot be furnished in the interest of public. Why not it should be disclosed so that these officials whose houses have been raised will they not be exposed ?

Out of 38 cases 8 cases have been enquired into 1986-87. ಎಂಟು ಪ್ರಕರಣಗಳಲ್ಲಿ ತನಿಖೆಯಾಗಿದೆ ಎಂದು ಹೇಳಿರುತ್ತೀರಿ, ಉಳಿದವುಗಳನ್ನು ತನಿಖೆ ಮಾಡಲು ಏತಕ್ಕೆ ತಡವಾಗುತ್ತಿದೆ. ಏತಕ್ಕೆ ಉಳಿದವುಗಳಿಗೂ ಎನ್‌ಕ್ವೈರಿ ಬೇಗ ಆಗಬಾರದು ? ಮಾನ್ಯ ಸಚಿವರ ಗಮನಕ್ಕೆ ಬಂದಮೇಲೆ ಅಫಿಷಿಯಲ್ಲ್ ಮನೆ ರೈಡ್ ಆದಮೇಲೆ, ಸಾಕಷ್ಟು ಪ್ರಾಪರ್ಟಿ ಪೇಪರ್ಸ್ ಆದ ಮೇಲೆ ಕೂಡಲೇ ಅಫಿಷಿಯಲ್ಲ್‌ನ್ನು ಎನ್‌ಕ್ವೈರಿ ಮಾಡಬೇಕಂ. ಇಲ್ಲದಿದ್ದರೆ ಅಫಿಷಿಯಲ್ ಮತ್ತು ತನಿಖಾಧಿಕಾರಿ ಇಬ್ಬರೂ ಶಾಮೀಲಾಗಿ ಎನ್‌ಕ್ವೈರಿ ಸಂದರ್ಭದಲ್ಲಿ ಸಾಕಷ್ಟು ಆದಾಯ ಸಿಕ್ಕಿಲ್ಲವೆಂದು ಹೇಳಿ ತಪ್ಪಿಸಿಕೊಳ್ಳಲು ಸಾಧ್ಯವಿರುತ್ತದೆ, ಇದು ತಮ್ಮ ಗಮನಕ್ಕೆ ಬಂದಿರುತ್ತದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೆಯ ಉಪ ಪ್ರಶ್ನೆಗೆ ಉತ್ತರ ಏನೆಂದರೆ, ಯಾವ ಪ್ರಕರಣದಲ್ಲಿ ತನಿಖೆ ಪೂರ್ತಿಯಾಗಿಲ್ಲವೋ ಆ ಪ್ರಕರಣದ ಬಗ್ಗೆ ವಿವರವನ್ನು ಕೊಡುವುದು ಸೂಕ್ತವಲ್ಲ. ವಿವರಗಳನ್ನು ಕೊಟ್ಟರೆ ಅವರ ತನಿಖಾ ಕೆಲಸಕ್ಕೆ ಭಂಗ ಬರುತ್ತದೆ. ಇದು ಒಂದು ಕಾರಣ. ಎರಡನೆಯದಾಗಿ, ಎಲ್ಲಿಯವರೆಗೆ ತನಿಖೆ ಪೂರ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ ವಂಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಕೆಲವರ ಮೇಲೆ ಪ್ರಾಸಿಕ್ಯೂಷನ್ ಲಾಂಚ್ ಮಾಡಬೇಕು. ತನಿಖೆ ಮಾಡದೆ ಪ್ರಾಸಿಕ್ಯೂಷನ್ ಲಾಂಚ್ ಮಾಡಲು ಸಾಧ್ಯವಿಲ್ಲ. ಈಗ ಎಂಟು ಪ್ರಕರಣಗಳಲ್ಲಿ ಆಸ್ತಿಪಾಸ್ತಿಗಳ ವಿವರಗಳನ್ನು ಕೊಡಲು ಸಾಧ್ಯ ಇದೆ ಒಂದು ಕೆ. ರಾಮಪ್ಪಾವ್, ಎ.ಇ.ಇ., ರಾಯಚೂರು ಜಿಲ್ಲೆ. ಅವರ ಆಸ್ತಿಪಾಸ್ತಿ ಬಗ್ಗೆ, ಮನೆ ನಿವೇಶನ, ಚಿನ್ನಬೆಳ್ಳಿ ಇವೆಲ್ಲವೂ ೩.೯೦ ಲಕ್ಷ ವೆಂದು ತನಿಖೆಯಿಂದ ತಿಳಿದು ಬಂದಿದೆ. ಇವರ ಆದಾಯ ಅವರು ಹೊಂದಿರುವ ಆಸ್ತಿ ಮತ್ತು ಖರ್ಚಿಗೆ ಅನುಗುಣವಾಗಿದೆ ಎಂದು ಗೊತ್ತಾಗಿದೆ.

೧೧-೩೦. ಎ. ಎಂ.

ವಿ. ರಾಜಗೋಪಾಲ್, ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಇವರ ಆಸ್ತಿಪಾಸ್ತಿ ಖರ್ಚುಗಳು ೨,೧೧,೩೭೭ ರೂಪಾಯಿಗಳು ಎಂದು ತನಿಖೆಯಿಂದ ಗೊತ್ತಾಗಿದೆ. ಮತ್ತು ೨೪ ಸಾವಿರ ರೂಪಾಯಿಗಳು ಅವರ ಆದಾಯಕ್ಕಿಂತ ಹೆಚ್ಚು ಇದೆ ಎಂದು ಗೊತ್ತಾಗಿದೆ. ಟಿ. ಚಂದ್ರಶೇಖರಪ್ಪ ಇವರ ಆಸ್ತಿಪಾಸ್ತಿ ಖರ್ಚು ಮನೆ ಮೋಟಾರ್ ಸೈಕಲ್, ಚರಾಸ್ತಿ ಎಲ್ಲಾ ಸೇರಿ ೫,೫೩,೪೪೮ ರೂಪಾಯಿಗಳು. ಆದರಲ್ಲಿ ೧೯,೬೬೩ ರೂಪಾಯಿಗಳು ಅವರ ಆದಾಯಕ್ಕಿಂತ ಹೆಚ್ಚು ಇರುವುದು

ಗೊತ್ತಾಗಿದೆ. ಅಂಜನಪ್ಪ ಎಂಬುವವರ ಆಸ್ತಿಪಾಸ್ತಿ ೧,೮೭,೯೪೩ ರೂಪಾಯಿಗಳು ಎಂದು ಗೊತ್ತಾಗಿದೆ. ಅದರಲ್ಲಿ ೧,೦೩,೦೦೦ ರೂಪಾಯಿಗಳು ಅವರ ಆದಾಯಕ್ಕಿಂತ ಹೆಚ್ಚು ಆಸ್ತಿ ಇದೆ ಎಂದು ಗೊತ್ತಾಗಿದೆ. ಐ.ಕೆ. ಭೂಪಯ್ಯ ಇವರದ್ದು ೪,೭೭,೨೭೨ ರೂಪಾಯಿಗಳ ಪೈಕಿ ಒಂದು ಲಕ್ಷದ ೪೨ ಸಾವಿರ ಚಿಲ್ಲರೆ ಆದಾಯಕ್ಕಿಂತ ಹೆಚ್ಚು ಆಸ್ತಿ ಇದೆ. ರುದ್ರಾಚಾರ್ ಅವರ ಆಸ್ತಿಪಾಸ್ತಿ ೧೧,೪೭,೭೪೧ ರೂಪಾಯಿಗಳು ಇದರಲ್ಲಿ ಆದಾಯದ ಲೆಕ್ಕದ ಮೇಲೆ ೪,೭೭,೮೦೦ ರೂಪಾಯಿಗಳಂ ಹೆಚ್ಚು ಆಸ್ತಿ ಅವರು ಹೊಂದಿರುವುದು ಗೊತ್ತಾಗಿದೆ. ವೆಂಕಟಸುಬ್ಬ ರೆಡ್ಡಿಯವರ ಎಲ್ಲಾ ಆದಾಯ ಒಟ್ಟು ೨೭,೦೫,೦೪೬ ರೂಪಾಯಿಗಳು. ತನಿಖೆಯಿಂದ ಏನು ತಿಳಿದುಬಂದಿದೆ ಎಂದರೆ ಎಲ್ಲಾ ಆದಾಯ ಒಟ್ಟು ೨೭,೪೭,೭೪೧ ರೂಪಾಯಿಗಳು ಇವನ್ನು ಲೆಕ್ಕಾಚಾರ ಮಾಡಿದರೆ ಆದಾಯಕ್ಕಿಂತ ಆಸ್ತಿ ಕಡಿಮೆ ಎಂಬುದು ಗೊತ್ತಾಗಿದೆ. ತನಿಖೆ ಏಕೆ ಇಷ್ಟೊಂದು ವಿಳಂಬವಾಗುತ್ತಿದೆ ಎಂದು ಮಾನ್ಯ ಸದಸ್ಯರು ಕೇಳಿದರು. ಈ ತನಿಖೆಯ ರೂಪವೇ ಹಾಗೆ. ಮೊಟ್ಟಮೊದಲಂ ಮನೆಯನ್ನು ರೈಡ್ ಮಾಡುವುದಕ್ಕೆ ನಾವು ಸಂಬಂಧಪಟ್ಟ ಮ್ಯಾಜಿಸ್ಟ್ರೇಟರಿಂದ ಪರವಾನಗಿ ಪಡೆದುಕೊಳ್ಳಬೇಕಾಗುತ್ತದೆ ಮೊದಲಿಗೆ ಪೊಲೀಸ್ ಸ್ಟೇಷನ್‌ನಲ್ಲಿ ಕೇಸನ್ನು ರಿಜಿಸ್ಟರ್ ಮಾಡಬೇಕಾಗುತ್ತದೆ, ಸರ್ಚ ವಾರಂಟ್ ಹೊರಡಿಸಬೇಕಾಗುತ್ತದೆ. ಇದೆಲ್ಲವನ್ನು ರಹಸ್ಯವಾಗಿ ಇಡಬೇಕಾಗಿರುವುದರಿಂದ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗುತ್ತದೆ. ಕಳೆದ ೨೦೩ ತಿಂಗಳಿನಿಂದೀಚೆಗೆ ಪ್ರತಿದಿನ ಸರಾಸರಿ ೧೦-೦೫ ಅರ್ಜಿಗಳು ಬರುತ್ತಿವೆ ಈ ಅರ್ಜಿಗಳಲ್ಲಿ ಬಹಳಷ್ಟು ಸ್ವಂತ ಹೆಸರಿನಲ್ಲಿ ಬರೆದ ಅರ್ಜಿಗಳು ಅಲ್ಲ. ಅದರಲ್ಲಿರತಕ್ಕ ಹೆಸರುಗಳು ಕೃತ್ರಿಮ ಹೆಸರುಗಳು. ಆದರೂ ತನಿಖೆ ಮಾಡಿಸಬೇಕು. ತನಿಖೆ ಮಾಡಿಸಿದ ಒಂದೆರಡು ಪ್ರಕರಣಗಳಲ್ಲಿ ಅರ್ಜಿಗೆ ಸಹಿ ಮಾಡಿದ ಜನರು ಸಿಕ್ಕಿದ್ದರೂ ಅವರು ಯಾವ ವಿಚಾರವನ್ನು ಬರೆದಿದ್ದರೋ ಅದು ನಿಜವೆಂದು ಗೊತ್ತಾಗಿದೆ. ನಾನು ಅಪೀಲು ಮಾಡಿದ ಮೇಲೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಅರ್ಜಿಗಳು ಬರುವುದಕ್ಕೆ ಪ್ರಾರಂಭವಾಗಿದೆ. ಅದಕ್ಕೆ ಸಿಬ್ಬಂದಿಯನ್ನು ಹೆಚ್ಚು ಮಾಡಿಕೊಳ್ಳಬೇಕಾಗುತ್ತದೆ. ಮತ್ತು ಲೋಕಾಯುಕ್ತರ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಪ್ರತ್ಯೇಕ ಖಾತೆಯನ್ನು ಇನ್ನೂ ಮಾಡಿಲ್ಲ. ಆ್ಯಂಟಿ ಕರಪ್ಷನ್ ವಿಂಗ್ ಎಂದು ಏನು ಇದೆ ಅದರ ಮೂಲಕ ಇದನ್ನು ಮಾಡುತ್ತಿದ್ದೇವೆ.

(ಅನೇಕ ಸದಸ್ಯರು ಪ್ರಶ್ನೆ ಕೇಳಲು ಎದ್ದುನಿಂತರು)

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಸವಿಸ್ತಾರವಾಗಿ ಉತ್ತರಿಸಿದ್ದರೂ ಇನ್ನೂ ಸಮಾಧಾನ ಇಲ್ಲವೆಂದರೆ ಹೇಗೆ ?

ಶ್ರೀ ಕೆ. ರಮೇಶ್ ಕುಮಾರ್.—ಒಟ್ಟು ಎಷ್ಟು ಪ್ರಕರಣಗಳಲ್ಲಿ ಧಾಳಿ ಸಡೆಸಿದ್ದಾರೆ. ಲೋಕಾಯುಕ್ತರೇ ಸ್ವಯಂಪ್ರೇರಿತರಾಗಿ ಧಾಳಿ ನಡೆಸಿದ್ದಾರೆಯೇ ? ಅಥವಾ ಅರ್ಜಿಗಳು ಬಂದಮೇಲೆ ನಡೆಸಿದ್ದಾರೆಯೇ? ಎಷ್ಟು ಪ್ರಕರಣಗಳಲ್ಲಿ ಅರ್ಜಿ ಬಂದಮೇಲೆ ಅರ್ಜಿಯನ್ನು ಆಧಾರವಾಗಿ ಇಟ್ಟುಕೊಂಡು ಧಾಳಿ ನಡೆಸಿದ್ದಾರೆ ? ಸ್ವಯಂಪ್ರೇರಿತರಾಗಿ ಧಾಳಿ ನಡೆಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ ಇಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಸ್ವಯಂಪ್ರೇರಿತರಾಗಿ ಅಂದರೆ ಯಾವುದೇ ನೀತಿಯ ಸೂಚನೆ ಬಾರದೆ ಯಾರ ಮನೆ ಮೇಲೆ ಧಾಳಿ ಮಾಡಬೇಕು. ಆತೊಂದರೆ ಇದೆ. ಲೋಕಾಯುಕ್ತರು ನೂರಾರು ಪ್ರಕರಣಗಳಲ್ಲಿ ಲಂಚವನ್ನು ಬೇರೆಯವರಿಂದ ಕೊಡಿಸಿ ಹಿಡಿಸತಕ್ಕದ್ದನ್ನು ಅವರಾಗಿಯೇ ಮಾಡಿಸಿದ್ದಾರೆ. ಅವರ ಕೆಲಸದಲ್ಲಿ ಅದು ಒಂದು ಭಾಗ. ಆದರೆ ಮನೆ ದಾಳಿ ಮಾಡುವುದಕ್ಕೆ ಕನಿಷ್ಟಪಕ್ಷ ನಂಬಲು ಅರ್ಹವಾದಂಥ ಸಂದ್ದಿ ಆದರೂ ಬರಬೇಕು. ಸಹಿಮಾಡಿ ಕೊಡದೇ ಇದ್ದರೂ ಇಂಥವರು ಇಂಥ ಕಡೆ ದೊಡ್ಡ ಮನೆ ಕಟ್ಟಿಸಿದ್ದಾರೆ, ಇಂಥ ಆಸ್ತಿ ಮಾಡಿದ್ದಾರೆ ಎಂಬ ಮಾಹಿತಿ ಸಿಕ್ಕರೆ ಅಂಥ ಸಂದರ್ಭದಲ್ಲಿ ವಿಚಾರಣೆ ಮಾಡಂತ್ತೇವೆ. ಏನೂ ಸುದ್ದಿ ಇಲ್ಲದೆ ಇದ್ದಕ್ಕಿದ್ದ ಹಾಗೆ ಪ್ರೇರಣೆ ಬಂದು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳು ಬಹಳ ಸುದೀರ್ಘವಾದ ಉತ್ತರ ಹೇಳಿದ್ದಾರೆ. ಆದರೆ ಒಂದು ಕೇಳುತ್ತೇನೆ. ಐ.ಎ ಎಸ್. ಅಧಿಕಾರಿಗಳು ತಮ್ಮ ಆದಾಯಕ್ಕಿಂತ ವಿೂರಿ ಬೆಂಗಳೂರಲ್ಲಿ ಮನೆ ಕಟ್ಟಿದ್ದರೂ ಕೂಡ ಅಂಥ ಅಧಿಕಾರಿಗಳನ್ನು ಬಿಟ್ಟು ಯಾರು ಪ್ರಾಮಾಣಿಕವಾಗಿ

ಮನೆತನದಿಂದ ಶ್ರೀಮಂತರಾಗಿ ಬಂದಿದ್ದಾರೆ ಅಂಥವರ ಮೇಲೆ ದಾಳಿ ಮಾಡುತ್ತಿದ್ದಾರೆ. ಐ.ಎ.ಎಸ್ ಅಧಿಕಾರಿಗಳು ಎರಡೆರಡು ಮನೆ ಮಾಡಿ ಒಂದು ಬಾಡಿಗೆಗೆ ಕೊಟ್ಟು ಸರ್ಕಾರದಿಂದ ಮತ್ತೊಂದು ಮನೆ ಕೇಳಿದ್ದಾರೆ. ಇಂಥ ಮಾಹಿತಿಗಳನ್ನು ನಾನು ಕೊಡಬೇಕೆ? ಅಥವಾ ತಾವೇ ಪರಿಶೀಲನೆ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಈಗ ಪಾಟೀಲರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಅವರು ಉತ್ತರ ಕೊಡುತ್ತಾರೆ. ಅದರ ಜೊತೆಗೆ ನಾನು ಇನ್ನೊಂದು ಪ್ರಶ್ನೆ ಕೇಳುತ್ತೇನೆ. ತಾವು ಹೇಳಿಕೆಯನ್ನು ಮಾಡಿದ್ದೀರಿ. ಲಂಚ ನಿರೋಧ ಕಾರ್ಯಕ್ರಮದ ಬಗ್ಗೆ ಬಹಳ ಅರ್ಜಿಗಳು ಬಂದಿವೆ ಎಂದು ಹೇಳಿದ್ದೀರಿ. ರುಜು ಹಾಕಿರುವುದೂ ಬಂದಿದೆ, ಹಾಕದೇ ಇರುವುದೂ ಬಂದಿವೆ ಎಂದು ಹೇಳಿದ್ದೀರಿ. ಈ ಅರ್ಜಿಗಳನ್ನು ಲೋಕಾಯುಕ್ತವನ್ನು ತಾವು ಏನು ನಿರ್ಮಾಣ ಮಾಡಿದ್ದೀರಿ ಅದಕ್ಕೆ ಕಳುಹಿಸತಕ್ಕೆ ಯೋಜನೆ ತಮಗಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ಬಸವಲಿಂಗಪ್ಪನವರೆ ಉಪ ಪ್ರಶ್ನೆಗೆ ಮೊದಲೇ ಉತ್ತರ ಕೊಡುತ್ತೇನೆ ಏನು ಅರ್ಜಿ ನನ್ನ ಹತ್ತಿರ ಬರುತ್ತದೆ ಆ ಎಲ್ಲಾ ಅರ್ಜಿಗಳನ್ನು ನಾನು ಲೋಕಾಯುಕ್ತದ ಕೆಳಗೆ ಕೆಲಸ ಮಾಡತಕ್ಕ ಪೋಲೀಸ್ ಆಫೀಸರ್‌ಗೆ ಕಳುಹಿಸಿಕೊಡುತ್ತೇನೆ. ಅವರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಆಗಿದ್ದಾರೆ. ಲೋಕಾಯುಕ್ತದ ಕಂಟ್ರೋಲ್‌ನಲ್ಲಿದ್ದಾರೆ. ಅವರ ಹತ್ತಿರ ಅರ್ಜಿಗಳನ್ನು ಕಳುಹಿಸಿಕೊಡುತ್ತೇನೆ. ನಮ್ಮ ಆಫೀಸಿನಿಂದ ಅಲ್ಲಿಗೆ ಹೋಗುತ್ತದೆ. ಮಾನ್ಯ ಪಾಟೀಲರ ಪ್ರಶ್ನೆಗೆ ಉತ್ತರ ಇಷ್ಟೆ. ಇದರಲ್ಲಿ ಐ. ಎ. ಎಸ್. ಅಧಿಕಾರಿಗಳು ಐಪಿಎಸ್ ಅಧಿಕಾರಿಗಳು ಅಥವಾ ಎರಡೂ ಬಿರುದು ಇಲ್ಲದೇ ಇರತಕ್ಕ ಸಾಮಾನ್ಯ ಅಧಿಕಾರಿಗಳು ಎಂದು ನಾವು ಯಾವುದೇ ವ್ಯತ್ಯಾಸ ಮಾಡುವುದಿಲ್ಲ. ಅಥವಾ ಇದರಲ್ಲಿ ತಾರತಮ್ಯ ನಾವು ಮಾಡುವುದಿಲ್ಲ. ಕೆಲವು ಐ.ಎ.ಎಸ್. ಅಧಿಕಾರಿಗಳ ಮನೆಯಲ್ಲಿ ಇರತಕ್ಕದ್ದು ಗೊತ್ತಾಗಿದೆ. ಅವರ ಬಗ್ಗೆ ಚೌಕಾಶಿ ನಡೆದಿದೆ. ಆದ್ದರಿಂದ ಮಾನ್ಯ ಪಾಟೀಲರು ಅವರನ್ನು ಪ್ರತ್ಯೇಕವಾದ ವಿಶೇಷ ದೃಷ್ಟಿಯಿಂದ ನೋಡುತ್ತೇವೆ ಎಂದು ತಿಳಿದುಕೊಳ್ಳಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಮೊನ್ನೆ ದಿವಸ ಪತ್ರಿಕೆಯಲ್ಲಿ ಹೇಳಿಕೆ ಕೊಡುತ್ತಾ ಕೆಲವು ಶಾಸಕರೂ ಸಹ ಅಂದರೆ ನಮ್ಮನ್ನೆಲ್ಲಾ ಸೇರಿಸಿ ಇದರಲ್ಲಿ ಭ್ರಷ್ಟ ಶಾಸಕರಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದೀರಿ. ಈ ತರಹ ಎಷ್ಟು ಜನ ಭ್ರಷ್ಟ ಶಾಸಕರ ಬಗ್ಗೆ ಲೋಕಾಯುಕ್ತಕ್ಕೆ ಕಳುಹಿಸಿದ್ದೀರಿ ? ಅವರ ಹೆಸರೇನು ಎಂದು ಹೇಳುವುದಕ್ಕಾಗುತ್ತದೆಯೆ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಅವರು ತಮ್ಮ ವಿಚಾರವನ್ನು ನನ್ನ ಬಾಯಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನೆಂತೂ ಭ್ರಷ್ಟ ಶಾಸಕರು ಎಂದು ಹೇಳಲಿಲ್ಲ. ನಮ್ಮ ಹತ್ತಿರ ಏನು ಪತ್ರ ಬರುತ್ತದೋ ಆ ಪತ್ರದಲ್ಲಿ ಕೆಲವು ಶಾಸಕರ ವಿರುದ್ಧ ದೂರನ್ನು ಬರೆದಂಥ ಪತ್ರಗಳಿರುತ್ತವೆ ಎಂದು ಹೇಳಿದ್ದೇನೆ. ಅದನ್ನು ತಕ್ಷಣ ಲೋಕಾಯುಕ್ತಕ್ಕೆ ಕಳುಹಿಸುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ, ಸಂಬಂಧಪಟ್ಟವರ ಮೇಲೆ ಏನು ಆಪಾದನೆ ಇದೆ ಅದು ಕನಿಷ್ಟಪಕ್ಷ ಮೇಲುನೋಟಕ್ಕೆ ಸತ್ಯಾಂಶ ಅದರಲ್ಲಿ ಕಾಣುತ್ತದೆಯೇ ಎಂದು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಾಸಕರಿಗೆ ಏನು ನಿಯಮ ಅಪ್ಲೈ ಮಾಡುತ್ತೀರೋ ಅಧಿಕಾರಿಗಳಿಗೂ ಅದೇ ನಿಯಮ ಅಪ್ಲೈ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಸಂದರ್ಭದಲ್ಲಿ ವೈಯಕ್ತಿಕವಾದ ದ್ವೇಷಾಸೂಯೆಯ ಕಾರಣದಿಂದಲೂ ಆರೋಪಗಳನ್ನು ಮಾಡಬಹುದು. ಆದ್ದರಿಂದ ತಕ್ಷಣ ಕಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಸ್. ನಾಗರತ್ನಮ್ಮ.—ನಾವು ಪತ್ರಿಕೆಯಲ್ಲಿ ಓದಿದಹಾಗೆ ಅವರ ಪಾರ್ಟಿಯಲ್ಲಿ ಶ್ರೀಮಾನ್ ಹೆಗ್ಗಡೆಯವರು ಇದನ್ನು ಕೇಳಿದ ಹಾಗೂ ಮತ್ತು ಅವರಿಗೆ ಮುಖ್ಯಮಂತ್ರಿಗಳು ಜವಾಬು ಕೊಟ್ಟ ಹಾಗೂ ಬಂದಿದೆ. ಬೇರೆ ಪಕ್ಷದಲ್ಲೂ ಲೆಜಿಸ್ಲೇಚರ್ಸ್ ಇದ್ದಾರೆ. ಅವರ ಮೇಲೂ ಆರೋಪಣೆ ಬಂದಿದೆ ಎಂದು ಹೇಳಿದಹಾಗೆ ಪತ್ರಿಕೆಯಲ್ಲಿ ಬಂತು, ಹಾಗೆ ಬೇರೆ ಪಕ್ಷದ ಲೆಜಿಸ್ಲೇಟರ್ಸ್ ಇದ್ದರೆ ದಯಮಾಡಿ ಅವರ ಹೆಸರುಗಳನ್ನು ತಿಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸಂದರ್ಭ ಬಂದಾಗ ತಿಳಿಸುತ್ತೇನೆ. ಶಾಸಕರು ಎಂದರೆ ಆ ಪಕ್ಷದವರು, ಈ ಪಕ್ಷದವರು, ಎಂದೆಲ್ಲ ಎಲ್ಲರೂ ಶಾಸಕರು.